**CC 1866/2025**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ**
**ನ್ಯಾಯಾಲಯ, ವಿಜಯನಗರ ಜಿಲ್ಲೆ, ಹೊಸಪೇಟೆ.**
**ಸಿಸಿ ನಂಬರ್ 1866/2025**

**ಸಿ ಡಬ್ಲೂ -1**
**ಪಿ ಡಬ್ಲೂ -1**

**ಸಾಕ್ಷಿಯ ಹೆಸರು - ಕಲ್ಪನಾ**
**ತಂದೆಯ ಹೆಸರು - ವೆಂಕಟೇಶ್**
**ವಯಸ್ಸು - 44 ವರ್ಷಗಳು**
**ಉದ್ಯೋಗ - ಕಿರಾಣಿ ವ್ಯಾಪಾರ**
**ವಾಸಸ್ಥಳ - ಹೊಸಪೇಟೆ**

**ಸಾಕ್ಷಿಯನ್ನು ದಿನಾಂಕಃ 18-03-2026 ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎ. ಪಿ. ಪಿ. ಅವರಿಂದ**

ನಾನು ಜಂಬುನಾಥ ರಸ್ತೆಯಲ್ಲಿ ಸಣ್ಣ ಅಂಗಡಿಯೊಂದನ್ನು ಇಟ್ಟುಕೊಂಡು ಜೀವನ ಮಾಡುತ್ತಿದ್ದೇನೆ. ದಿಃ **27-12-2024** ರಂದು ನಾನು ಅಂಗಡಿಯಲ್ಲಿದ್ದಾಗ ರಾತ್ರಿ **9.00-9.30** ಗಂಟೆಗೆ ಒಬ್ಬ ಹುಡುಗ ಬಂದು ಚಕ್ಕುಲಿ ಕೊಡಿ ಎಂದು ಕೇಳಿದ. ನಾನು ಒಂದು ಡಬ್ಬಿಯಲ್ಲಿದದ್ದ ಚಕಕ್ಕುಲಿಯನ್ನು ತೆಗೆದು ಆ ಹುಡುಗನಿಗೆ ಕೊಡಿ ಆತ ಇನ್ನೊಮ್ಮೆ ಚಕ್ಕುಲಿ ಕೇಳಿದ. ನಾನು ಸ್ವಲ್ಪ ಬಾಗಿ ಒಂದು ಡಬ್ಬಿಯಿಂದ ಚಕ್ಕುಲಿ ತೆಗೆದು ಕೊಡುವಾಗ ಆ ಹುಡುಗ ನನ್ನ ಕೊರಳಲ್ಲಿದ್ದ **2** ಎಳೆ ಮಾಂಗಲ್ಯ ಸರವನ್ನು ಕಿತ್ತುಕೊಂಡ. ನಾನು ಕಿರುಚಿಕೊಂಡಾಗ ಆ ಹುಡುಗ ಜಂಬುನಾಥ ರಸ್ತೆಯಲ್ಲಿ ಒಡಿಹೋದ. ಸದರಿ ಹುಡುಗ ತೆಳ್ಳಗೆ ಮತ್ತು ಬೆಳ್ಳಗೆ ಇದ್ದ. ನಾನು ಮರುದಿನ ಬೆಳಿಗ್ಗೆ **6.00** ಗಂಟೆಗೆ ಹೊಸಪೇಟೆ ಪಟ್ಟಣ ಪೋಲಿಸ್ ಠಾಣೆಗೆ ಹೋಗಿ ದೂರು ನೀಡಿರುತ್ತೇನೆ. ಸಾಕ್ಷಿ ದೂರು ನೋಡಿ ಗುರುತಿಸಿದ್ದು, ಅದನ್ನು ನಿಪಿಃ **1** ಎಂದು, ಸಾಕ್ಷಿಯ ಸಹಿಯನ್ನು ನಿಪಿಃ **1(ಎ)** ಎಂದು ಗುರುತಿಸಲಾಯಿತು.

ನಾನು ದೂರು ನೀಡಿದ ದಿನದಂದು ಪೋಲಿಸರು ಸ್ಥಳಕ್ಕೆ ಸಂಜೆ 5.00 ಗಂಟೆಗೆ ಬಂದಿದ್ದರು. ಪಂಚನಾಮೆ ಕಾಲಕ್ಕೆ ಬಂದಿದ್ದ ವ್ಯಕ್ತಿಗಳ ಹೆಸರು ನನಗೆ ನೆನಪಿಲ್ಲ. ಪಂಚನಾಮೆಯನ್ನು ಚಾಸಾ -13 ರವರು ಬರೆದಿರುತ್ತಾರೆ.

ಈಗ ನಾನು ನೋಡುತ್ತಿರುವ ದಾಖಲೆಯಲ್ಲಿನ ಸಹಿ ನನ್ನದೇ ಆಗಿರುತ್ತದೆ. ಸಾಕ್ಷಿ ಕೃತ್ಯ ಸ್ಥಳ ಪಂಚನಾಮೆಯಲ್ಲಿನ ಸಹಿ ನೋಡಿ ಗುರುತಿಸಿರುತ್ತಾರೆ. ಸದರಿ ಪಂಚನಾಮೆಯನ್ನು ನಿಪಿಃ 2 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ 2(ಎ) ಎಂದು ಗುರುತಿಸಲಾಯಿತು.

ಕಚ್ಚಾ ನಕಾಶೆಯಲ್ಲಿನ ಸಹಿ ನನ್ನದೇ ಆಗಿರುತ್ತದೆ. ಸಾಕ್ಷಿ ಕಚ್ಚಾ ನಕಾಶೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿಃ 3 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ 3(ಎ) ಎಂದು ಗುರುತಿಸಲಾಯಿತು.

ಈಗ ನಾನು ನೋಡುತ್ತಿರುವ 1 ಪೋಟೋದಲ್ಲಿನ ವ್ಯಕ್ತಿ ನಾನೇ ಇರುತ್ತೇನೆ. ಸದರಿ ಪೋಟೋವನ್ನು ನಿಪಿಃ 4 ಎಂದು ಗುರುತಿಸಲಾಯಿತು.

ದಿಃ 17-01-2025 ರಂದು ಪೋಲಿಸರು ನನ್ನನ್ನು ಠಾಣೆಗೆ ಕರೆಯಿಸಿ ಒಬ್ಬ ಆರೋಪಿಯನ್ನು ತೋರಿಸಿ ಗುರುತಿಸಲು ಹೇಳಿದ್ದರು. ಸದರಿ ವ್ಯಕ್ತಿಯನ್ನು ನಾನು ನೋಡಿ ಆತನೇ ಸರಗಳ್ಳತನ ಮಾಡಿದ ವ್ಯಕ್ತಿ ಎಂದು ಗುರುತಿಸಿದ್ದೆ. ಸದರಿ ವ್ಯಕ್ತಿಯ ಹೆಸರನ್ನು ವಿಷ್ಣು ಎಂದು ತಿಳಿಸಿದ್ದರು. ಆತನನ್ನು ನೋಡಿದರೆ ಗುುತಿಸುತ್ತೇನೆ. ಸಾಕ್ಷಿ ವಿಡಿಯೋ ಕಾನ್ಸರೆನ್ಸ್ ನಲ್ಲಿ ಹಾಜರಿರುವ 1 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಅದೇ ದಿನ ನಾನು ಪೋಲಿಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ. ಪೋಲಿಸರು ನನಗೆ ಠಾಣೆಯಲ್ಲಿದ್ದ ನನ್ನ ಮಾಂಗಲ್ಯ ಸರವನ್ನು ತೋರಿಸಿದ್ದರು. ನಾನು ಸರಿ ಸರವನ್ನು ಬಪಿಡಿಸಿಕೊಂಡಿರುತ್ತೇನೆ. ಸಾಕ್ಷಿ ಇಡೆನಂನಿಟಿ ಬಂಡ್ ನೋಡಿ ಗುರುತಿಸಿದ್ದು, ಅದನ್ನು ನಿಪಿಃ 5 ಎಂದು, ಸಾಕ್ಷಿ ಯ ಸಹಿಯನ್ನು ನಿಪಿಃ

5(ಎ) ಎಂದು ಗುರುತಿಸಲಾಯಿತು. ಸಾಕ್ಷಿ 4 ಫೋಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಒಟ್ಟಾಗಿ ನಿಪಿಃ 6 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಮಾನ್ಯ ಎ.ಪಿ.ಪಿ. ಅವರು ಅನುಮತಿ ಕೇಳಿದ್ದು, ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲು ಮಾನ್ಯ ಎ ಪಿ ಪಿ ಅವರಿಂದಃ**

ದಿಃ 29-12-2024 ರಂದೇ ಪೋಲಿಸರು ನನ್ನನ್ನು ಠಾಣೆಗೆ ಕರೆಯಿಸಿ ಆರೋಪಿಯನ್ನು ತೋರಿಸಿ ಅದೇ ದಿನ ಆರೋಪಿಯ ಬಳಿ ಇದ್ದ ಮಾಂಗಲ್ಯ ಸರವನ್ನು ನನಗೆ ತೋರಿಸಿದ್ದರು ಅಂದರೆ ಸರಿ.

**ಪಾಟೀ ಸವಾಲು 1 ನೇ ಆರೋಪಿ ಪರ ಶ್ರೀ ಬಿ ಎಂ ವಕೀಲರಿಂದಃ**

ದೂರನ್ನು ಚಾಸಾ -13 ರವರೇ ಬರೆಸಿರುತ್ತಾರೆ. ದೂರಿನಲ್ಲಿ ಎನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಅಂದರೆ ಸರಿಯಲ್ಲ. ಕಳ್ಳತನ ಆಗಿತ್ತು ಎನ್ನಲಾದ ಮಾಂಗಲ್ಯ ಸರದ ಬಿಲ್ ಅನ್ನು ನಾನು ಪೋಲಿಸರಿಗೆ ನೀಡಿರಲಿಲ್ಲ. ಮಂಗಲ್ಯ ಸರ ಯಾವ ವಿನ್ಯಾಸದ್ದು ಎಂದು ದೂರಿನಲ್ಲಿ ಹೇಳಿ ಬರೆಸಿಲ್ಲ ಅಂದರೆ ಸರಿ. ಸಾಕ್ಷಿ ಮುಂದುವರೆದು 2 ಎಳೆ ಸರ ಎಂದು ಬರೆಸಿರುತ್ತೇನೆ ಎಂದು ನುಡಿಯುತ್ತಾರೆ.

ಪಂಚನಾವೆಯನ್ನು ಯಾರು ಬರೆದರು ಮತ್ತು ಬರೆಯಲು ಯಾರು ಮಾಹಿತಿ ನೀಡಿದರು ಎಂದು ನನಗೆ ಗೊತ್ತಿಲ್ಲ. ಸ್ಥಳಕ್ಕೆ ಯಾವ ಪಂಚರು ಬಂದಿದ್ದರು ಎಂದು ನನಗೆ ಮಾಹಿತಿ ಇಲ್ಲ ಅಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸೋಮಪ್ಪ ಇದ್ದರು ಎಂದು ನುಡಿಯುತ್ತಾರೆ. ಆರೋಪಿಯನ್ನು ಪೋಲಿಸರು ತೋರಿಸಿದಾಗಲೇ

**CC 1866/2025**

ನೋಡಿರುತ್ತೇನೆ ಅಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆತನೇ ಚಕ್ಕುಲಿ ಖರಿಲದಿಸಲು ಬಂದಿದ್ದ ಎಂದು ನುಡಿಯುತ್ತಾರೆ. ಪಂಚನಾಮೆ ಕಾಲಕ್ಕೆ ಯಾರು ಪೋಟೊ ತೆಗೆದರು ಎಂದು ನನಗೆ ಗೊತ್ತಿಲ್ಲ ಅಂದರೆ ಸರಿ. ಆರೋಪಿ ನನ್ನ ಅಂಗಡಿ ಬಳಿ ಬಂದಿರಲಿಲ್ಲ ಮತ್ತು **2** ಎಳೆ ಬಂಗಾರದ ಮಾಂಗಲ್ಯ ಸರವನ್ನು ಕಿತ್ತುಕೊಂಡು ಹೋಗಿಲ್ಲ ಅಂದರೆ ಸರಿಯಲ್ಲ. ಪೋಲಿಸರು ನನ್ನ ಮಾಂಗಲ್ಯ ಸರ ಕೊಡುತ್ತೇವೆ ಎಂದು ಹೇಳಿದ್ದರಿಂದ ಅವರ ಮಾತು ಕೇಳಿ ಆರೋಪಿಯೇ ಕದ್ದಿರುತ್ತಾನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ದಿಃ **29-12-2024** ರಂದು ಪೋಲಿಸರು ನನ್ನ ಮರುಹೇಳಿಕೆಯಲ್ಲಿ ಏನು ಬರೆದುಕೊಂಡರು ಎಂದು ನನಗೆ ಗೊತ್ತಿಲ್ಲ ಅಂದರೆ ಸರಿ. ಪೋಲಿಸರು ನನ್ನ ಮನೆಯ ಬಳಿ ಬಂದು ಯಾವುದೇ ಪಂಚನಾಮೆ ಮಾಡಿಲ್ಲ ಅಂದರೆ ಸರಿಯಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಸಂಬಂಧ ಇಲ್ಲ ಅಂದರೆ ಸರಿಯಲ್ಲ.

**ಪಾಟೀ ಸವಾಲು 2 ನೇ ಆರೋಪಿ ಪರ ಶ್ರೀ ಯು ಜಿ ವಕೀಲರಿಂದಃ ಇಲ್ಲಾ**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ವಿಜಯನಗರ ಜಿಲ್ಲೆ, ಹೊಸಪೇಟೆ.